ಯಾವಾಗಲೋ ನನ್ನನ್ನು ಬುಡಸಮೇತ ಕತ್ತರಿಸಿ ಹಾಕಿ ಫ್ಲೈಓವರ್ ಮಾಡಿಬಿಟ್ಟಿರುತ್ತಿದ್ದರೇನೋ. ಆದರೆ ನನ್ನ ಬುಡದ ಕಟ್ಟೆಯಲ್ಲಿದ್ದ ವಿಗ್ರಹಗಳ ಪೂಜೆಯನ್ನು ನಿರ್ಬಂಧಿಸಿ ದೇವಸ್ಥಾನದಲ್ಲಿ ಮಾತ್ರ ಪೂಜೆ ಮಾಡಬೇಕೆಂಬುದಾಗಿ ನಿಯಮ ಮಾಡಿಬಿಟ್ಟಿದ್ದರು. ವಾಹನ ಓಡಾಟ ಜಾಸ್ತಿಯಾಗಿ ಹೊಗೆಯ ಹೊಡೆತವನ್ನು ತಾಳಲಾರದೇ ಜನ ನನ್ನ ಬುಡದಲ್ಲಿ ಕೂತು ಹರಟೆ ಕೊಚ್ಚುತ್ತಿದ್ದವರೂ ಈಗ ನಾಪತ್ತೆಯಾಗಿದ್ದರು. ಎಲ್ಲೋ ಬೆಳಗ್ಗೆ ವಾಕಿಂಗಿಗೆಂದು ಬಂದವರು ಮಾತ್ರ ಐದು ಹತ್ತು ನಿಮಿಷ ನಿಂತೋ, ಕುಂತೋ ಅವರವರ ಕೆಲಸಗಳನ್ನು ಹಿಂಬಾಲಿಸಿಕೊಂಡು ಹೊರಟುಬಿಡುತ್ತಿದ್ದರು.

ಹಿಂದಿನಂತೆ ಈಗ ಯಾರಿಗೂ ತಾಳ್ಮೆಯಿರಲಿಲ್ಲ. ಎಲ್ಲರಿಗೂ ಎಲ್ಲವೂ ಕ್ಷಣಾರ್ಧದಲ್ಲಿ ಆಗಿಬಿಡಬೇಕು ಎಂಬಂತೆ ಮೊಬೈಲಿನ ಬೆನ್ನತ್ತಿ ಅದರಷ್ಟೇ ವೇಗವಾಗಿ ಸಂಚರಿಸುತ್ತಿದ್ದರು. ಅದರ ವೇಗವೂ ಕಡಿಮೆಯಾಯಿತೆಂದು ಇನ್ನಷ್ಟು ವೇಗದ್ದನ್ನು ಕಂಡುಹಿಡಿಯಬೇಕೆಂದು ಚಡಪಡಿಸುತ್ತಿದ್ದರು. ಇಲ್ಲವೇ ಅದರ ಎರಡು ಪಟ್ಟು ಹೆಚ್ಚಿನ ಶಕ್ತಿಯ ಮೊಬೈಲು, ಕಂಪ್ಯೂಟರ್ ಬರುವುದನ್ನೇ ಬಕಪಕ್ಷಿಯಂತೆ ಕಾದಿದ್ದು ಕೊಂಡುಕೊಳ್ಳುತ್ತಿದ್ದರು. ಸ್ವಾತಂತ್ರ್ಯ ಬಂದ ಕಾಲಕ್ಕೆ ಹೋಲಿಸಿದರೆ ಈ ಎಪ್ಪತ್ತು ಎಪ್ಪತ್ತೈದು ವರ್ಷಗಳಲ್ಲಿ ಕೊಳ್ಳುವ ಅಗಾಧ ಶಕ್ತಿಯನ್ನು ಸಂಪಾದಿಸಿಕೊಂಡಿದ್ದರು. ಆದರೆ ಅಷ್ಟೇ ತಾಳ್ಮೆಯನ್ನು ಕಳೆದುಕೊಂಡುಬಿಟ್ಟಿದ್ದರು. ಹಿಂದಿನ ಕಾಲದಲ್ಲಿ ತಮ್ಮ ಆಯಸ್ಸು ನೂರು ವರ್ಷ ಎನ್ನುವಂತೆ ನಿಧಾನಕ್ಕೆ ಎಲ್ಲವನ್ನೂ ನಿರ್ವಹಿಸುತ್ತಿದ್ದರೆ ಈಗಿನವರು ತಮ್ಮ ಕಾಲ ಇನ್ನೇನು ಇಪ್ಪತ್ತು ಮುವತ್ತು ವರ್ಷಗಳಿಗೇ ಮುಗಿದುಹೋಗುತ್ತದೆ, ಐವತ್ತವರೆಗಿದ್ದರೆ ಅದೇ ಹೆಚ್ಚು ಎನ್ನುವಂತೆ ಸಾಯುವುದರೊಳಗೆ ಎಲ್ಲವನ್ನೂ ಮುಗಿಸಿಬಿಡಬೇಕೆಂಬಂತೆ ಚಡಪಡಿಸುತ್ತಿದ್ದರು. ಶಾಸಕರೂ ಮಂತ್ರಿವರ್ಯರೂ ಅಷ್ಟೇ, ತಮಗೆ ಸಿಕ್ಕಿರುವ ಐದು ವರ್ಷಗಳ ಸುವರ್ಣಾವಕಾಶವನ್ನು ಸುವರ್ಣಾಕ್ಷರದಲ್ಲಿ ಬರೆದಿಡಬೇಕೆನ್ನುವಷ್ಟು ಗಳಿಸಿಕೊಂಡುಬಿಡಲು ಹಪಹಪಿಸುತ್ತಿದ್ದರು.

ಎಲ್ಲರಿಗೂ ದಾಹ ಎನ್ನುವುದು ಹಸಿವನ್ನೂ ಮೀರಿ ಮುನ್ನುಗ್ಗುತ್ತಿತ್ತು. ಎಲ್ಲರೂ ತಾವು ಎಷ್ಟು ಗಳಿಸಿದ್ದೇವೆ ಎಂಬುದರ ಮೇಲೆಯೇ ತಮ್ಮ ಸ್ಥಾನಮಾನ ನಿರ್ಧಾರವಾಗುತ್ತದೆಯೆಂದೇ ಭಾವಿಸಿದ್ದರು. ಜನಗಳೆಲ್ಲರಿಗೆ ತಮ್ಮ ಫೇಸ್‌ಬುಕ್, ಟ್ವಿಟರ್, ಇನ್‌ಸ್ಟಾಗ್ರಾಮಿನ ಫಾಲೋವರ್‌ಗಳ ಸಂಖ್ಯೆಯೇ ಹೆಚ್ಚಾಗಿತ್ತೇ ಹೊರತು ಜನರ, ಸಂಬಂಧಿಕರ ಪ್ರೀತಿಯ ಫಾಲೋವರ್‌ಗಳ ಸಂಖ್ಯೆ ಅಲ್ಲ ಎಂದುಕೊಂಡಿದ್ದರು. ಮನೆಗಳಲ್ಲಿ ಯಾವುದಾದರೂ ಕಾರ್ಯಕ್ರಮಗಳು ನಡೆದರೂ ವಾಟ್ಸ್ ಆ್ಯಪ್‌ನಲ್ಲಿ ಮಾಹಿತಿ ಕೊಡುತ್ತಿದ್ದರೇ ವಿನಾ ಹಿಂದಿನಂತೆ ಮನೆಮನೆಗೆ ಹೋಗಿ ಕರೆದುಬರುವಷ್ಟು ಸೌಜನ್ಯ, ತಾಳ್ಮೆ ಯಾರಿಗೂ ಇರಲಿಲ್ಲ. ಹಿಂದೆಲ್ಲ ಹಾಗೆ ವೈಯಕ್ತಿಕವಾಗಿ ಬಂದು ಕರೆಯದೇ ಇದ್ದರೆ ಮುನಿಸಿಕೊಂಡು ಹೋಗದೇ ಇರುವ ಪ್ರಮೇಯ ಈಗ ಬದಲಾಗಿಹೋಗಿತ್ತು. ಅವರು ತಮ್ಮ ಮನೆವರೆಗೆ ಬರುವುದು, ಅವರಿಗೆ ಕಾಫಿಯೋ, ಟೀಯೋ ತಿಂಡಿಯೋ ಕೊಡುತ್ತ ಕೂತು ತಮ್ಮ ಬದುಕಿನ ಸುಮಾರು ಅರ್ಧಗಂಟೆಯನ್ನು ಕಳೆದುಕೊಳ್ಳುವುದು ಕರೆಸಿಕೊಳ್ಳುವವರಿಗೂ ಬೇಡವಾಗಿತ್ತು. ಹೀಗೆ ಪರಸ್ಪರ ಸಂಬಂಧಗಳೇ ದೂರದೂರವಾಗುತ್ತಿರಬೇಕಾದರೆ ನನ್ನ ಬುಡಕ್ಕೆ ಮತ್ತೊಂದು ಆತಂಕ ಎದುರಾಯಿತು.

## ಇಲ್ಲಿಯವರೆಗೆ...



ಎಲ್ಲ ದಾಂಪತ್ಯದಂತೆ ಬೇವಿನಮ್ಮನೊಂದಿಗೆ ಮಹಾವೃಕ್ಷದ ಸಂಸಾರವೂ ಸರಸ ವಿರಸದೊಂದಿಗೆ ನಡೆಯತೊಡಗಿತು. ಅದೇ ಸಮಯಕ್ಕೆ ಮರದ ನೆರಳಿಗೆ ಬಂದದ್ದು ಮಂಜುನಾಥ. ಹಿಂದೊಮ್ಮೆ ಮರವನ್ನು ಕಡಿಯಲು ನಾನಾ ಸಂಚು ಹೂಡಿದವನು, ಈಗ ಮಗನನ್ನು ಕಳೆದುಕೊಂಡ ದುಃಖದಲ್ಲಿ ಸಂಸಾರ ಬಿಟ್ಟು ಪ್ರಕೃತಿಯ ಆಸರೆ ಹುಡುಕಿಕೊಂಡು ಬಂದಿದ್ದ. ವಿಷಾದದಲ್ಲಿ ತೋಯ್ದ ಅವನ ಮಹಾಮೌನ ಜನರ ಕಣ್ಣಿಗೆ ಅಲೌಕಿಕ ವಿದ್ಯಮಾನದಂತೆ ಕಾಣಿಸಿತು. ಮಂಜುನಾಥನೊಳಗೆ ಅಲೌಕಿಕ ಪ್ರಭೆ ಕಾಣಿಸಿದ್ದೇ ತಡ, ಅವನ ಸುತ್ತ ಭಕ್ತರ ಸದ್ದುಗದ್ದಲ ಶುರುವಾಯಿತು. ಅದರ ಫಲವೇ, ಮಠವೊಂದು ಶುರುವಾಯಿತು. ಸಂಸಾರದ ಚೌಕಟ್ಟನ್ನು ದಾಟಿದ ಮಂಜುನಾಥ ಅಧ್ಯಾತ್ಮದ ಕೇಂದ್ರವೊಂದರ ಹುಟ್ಟಿಗೆ ಕಾರಣನಾದ.

### ಕೊಂಬೆ12

ಯಾವುದೋ ರಾಜಕೀಯ ಭಾಷಣಕ್ಕೆ ಬಂದಿದ್ದ ಕೇಂದ್ರ ಸಾರಿಗೆ ಮಂತ್ರಿ ನನ್ನ ಸುತ್ತಮುತ್ತ ಎದುರಾಗುತ್ತಿರುವ ವಾಹನಗಳ ದಟ್ಟಣೆಯಲ್ಲಿ ಒಮ್ಮೆ ಸಿಕ್ಕಿಹಾಕಿಕೊಂಡು ತನ್ನ ತಾಳ್ಮೆಯನ್ನು ಕಳೆದುಕೊಂಡಾಗ, 'ಇಲ್ಲಿ ಯಾವಾಗಲೂ ಹೀಗೇ ಸರ್...' ಎಂಬ ಸ್ಥಳೀಯ ಅಧಿಕಾರಿಗಳ ವರದಿಗೆ ತಲೆದೂಗಿ ಅಲ್ಲಿಗೆ ಒಂದು ಫ್ಲೈಓವರ್ ಕಟ್ಟಲು ಹೇಳಿಯೇಬಿಟ್ಟನಂತೆ. ಯಾವಾಗ ಪೇಪರಿನ ಮೇಲೆ ಆತನ ಸಹಿ ಬಿತ್ತೋ ಆಗ ಅಧಿಕಾರಿಗಳು ತಮ್ಮ ತಮ್ಮ ಸರ್ವೇ ಉಪಕರಣಗಳನ್ನು ಹೊತ್ತುಕೊಂಡು ಬಂದರು. ಒಂದು ಗುಂಪು ಟ್ರಾಫಿಕ್ ಸರ್ವೇ ಮಾಡಲಾರಂಭಿಸಿತು. ಆ ರಸ್ತೆಯಲ್ಲಿ ಎಷ್ಟು, ಈ ರಸ್ತೆಯಲ್ಲಿ ಎಷ್ಟು ಬಸ್ಸುಗಳು, ಕಾರುಗಳು, ಲಾರಿಗಳು, ದ್ವಿಚಕ್ರ ವಾಹನಗಳು ಓಡಾಡುತ್ತವೆಯೆಂದು ಲೆಕ್ಕಹಾಕಿದರೆ, ಇನ್ನೊಂದು ಗುಂಪು ರಸ್ತೆಯ ಭೌಗೋಳಿಕ ನಕ್ಷೆ ತಯಾರಿಸಿತು. ಯಾವುದನ್ನು ಅಂಡರ್‌ಪಾಸ್ ಮಾಡಬೇಕು, ಯಾವುದನ್ನು ಓವರ್‌ಪಾಸ್ ಮಾಡಬೇಕು, ಎಲ್ಲಿ ಎಡತಿರುವು ಕೊಡಬೇಕು, ಎಲ್ಲಿ ಬಲತಿರುವು ಕೊಡಬೇಕು, ಹೇಗೆ ಕೆಳಗಿನಿಂದ ಮೇಲಕ್ಕೆ ಹತ್ತಿಸಬೇಕು, ಹೇಗೆ ಮೇಲಿನಿಂದ ಕೆಳಕ್ಕೆ ಇಳಿಸಬೇಕು ಎಂಬಿತ್ಯಾದಿಯಾಗಿ ಲೆಕ್ಕಾಚಾರ ಮಾಡಿ ಸರ್ವೇ ಸ್ಕೆಚ್ ರೆಡಿ ಮಾಡಿತು. ಇದರಿಂದಾಗಿ ಎಷ್ಟು ಅಂಗಡಿಗಳನ್ನು, ಎಷ್ಟು ಮನೆಗಳನ್ನು ಸ್ಥಳಾಂತರಿಸಬೇಕು ಎಂಬುದರ ಜೊತೆಗೆ ಎಷ್ಟು ಮರ ಕಡಿಯಬೇಕು ಎಂಬ ಪ್ರಸ್ತಾವನೆಯೂ ಸೇರಿತ್ತು. ಬಹಳ ಮುಖ್ಯವಾದದ್ದೆಂದರೆ ನನ್ನನ್ನು ಕಡಿಯದೇ ಗತ್ಯಂತರವೇ ಇಲ್ಲವೆಂಬಂತೆ ಆ ವರದಿ ಸಿದ್ಧವಾಗಿತ್ತು.

ಮೀಟಿಂಗ್ ಕರೆದ ಮುಖ್ಯ ಇಂಜಿನಿಯರ್ ಸಿದ್ಧಗಂಗಯ್ಯ ಹಿಂದೆ ತಾನು ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಆಗಿದ್ದಾಗ ಆದ ಮಂಜುನಾಥನ ಉದಾಹರಣೆಯನ್ನು ನೀಡಿ, ಆ ದೇವರ ಮರವನ್ನು ಕಡಿಯದೇ ಕೆಲಸ ನಿರ್ವಹಿಸುವಂತೆ ಸ್ಕೆಚ್ ತಯಾರಿಸಿ ಕೊಡಿ ಎಂದು ತಾಕೀತು ಮಾಡಿದರು. ಆದರೆ ಡಿಪಿಆರ್ ಮಾಡುತ್ತಿದ್ದ ಖಾಸಗಿ ಸಂಸ್ಥೆಯ ತಂಡದ ಮುಖ್ಯಸ್ಥ, ತಾನೂ ಸ್ಥಳ ಪರಿಶೀಲನೆ ಮಾಡಿದ್ದು ಹಾಗೆ ಮಾಡುವುದಾದರೆ ಅಲೈನ್‌ಮೆಂಟ್ ಬರುವುದಿಲ್ಲ, ಕರ್ವೇಚರ್ ಹೆಚ್ಚಾಗುತ್ತದೆ, ಸ್ಪೀಡ್ ಲಿಮಿಟ್ ಕಡಿಮೆಯಾಗುತ್ತದೆ, ಆಕ್ಸಿಡೆಂಟ್‌ಗಳಿಗೆ ಅವಕಾಶವಾಗುತ್ತದೆ ಎಂದೆಲ್ಲ ವಾದಿಸಿದ.

ಮುಂದುವರೆದು ದೊಡ್ಡ ಅಸ್ತ್ರ ಸಿಕ್ಕವನಂತೆ, ಸರ್ಕಾರಕ್ಕೆ ಸ್ವಲ್ಪ ಹಣ ಹೆಚ್ಚು ವೆಚ್ಚ ಆದರೂ ಪರವಾಗಿಲ್ಲ ಅನ್ನೋದಾದರೆ ಕೆಲವು ರೆಂಬೆಗಳನ್ನು ಮಾತ್ರ ಕಡಿದು ಫ್ಲೈಓವರ್‌ಗೆ ಬೇಕಾದರೆ ಲಾಂಗ್ ಹಾರಿಜಾಂಟಲ್ ಕರ್ವ್ ಕೊಡಬಹುದು. ಆದರೆ ಅಂಡರ್‌ಪಾಸ್ ಮಾಡ್ಲಿಕ್ಕೆ ಹೇಗೆ ಸಾಧ್ಯ? ಭೂಮಿಯೊಳಗೆ ಕರ್ವ್ ಮಾಡೋಕ್ಕಾಗಲ್ಲ. ಆಗ ಬಹಳಷ್ಟು ದೊಡ್ಡದೊಡ್ಡ ಕಟ್ಟಡಗಳ ತಳಪಾಯಗಳಿಗೆ ಅಪಾಯ ಆಗುತ್ತದೆ. ಕೊಂಬೆಗಳನ್ನು ಕತ್ತರಿಸಿದಂತೆ ಬೇರುಗಳನ್ನು ಕತ್ತರಿಸಿದರೂ, ಮುಂದೆ ಬೇರುಗಳು ಭೂಮಿಯಾಳದಲ್ಲಿ ಬಲಿತು ನಮ್ಮ ಪ್ರೊಟೆಕ್ಷನ್ ವಾಲ್ ಕುಸಿದು, ಇನ್ನಷ್ಟು ಅಪಾಯಕ್ಕೆ ದಾರಿಯಾಗುತ್ತದೆ. ಅದರಿಂದಾಗಿ ಆ ಮರವನ್ನು, ಅಂದರೆ ನನ್ನನ್ನು, ಕಡಿಯದೇ ಆ ಫ್ಲೈಓವರನ್ನು ಕಟ್ಟಲು ಸಾಧ್ಯವೇ ಇಲ್ಲವೆಂದು ಖಡಾಖಂಡಿತವಾಗಿ ಹೇಳಿಬಿಟ್ಟ.

ನನ್ನ ದುರದೃಷ್ಟಕ್ಕೆ ಮತ್ತೊಂದು ಮಾರ್ಗವಾಗಿ ಬರುತ್ತಿದ್ದ ಮೆಟ್ರೋರೈಲಿನ ಕಾಮಗಾರಿಯ ನಕಾಶೆಯಲ್ಲಿಯೂ ನನ್ನನ್ನು ಆವರಿಸಿಕೊಂಡೇ ಹೋಗುವಂತೆ ಚಿತ್ರಿಸಿದ್ದರು. ಕೆಳಗೆ ಅಂಡರ್‌ಪಾಸ್, ಅದರ ಮೇಲೆ ಸಪಾಟು ರಸ್ತೆ, ಅದರ ಮೇಲೆ ಫ್ಲೈಓವರ್, ಅದರ ಮೇಲೆ ಮೆಟ್ರೋ ಹೀಗೆ